ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಕೊಡಗು ಜಿಲ್ಲೆಯ ವಿರಾಜಪೇಟೆಯ ಮಂಡಲ ಪಂಚಾಯಿತಿಯವರಿಗೆ ಬಯಲು ರಂಗಮಂದಿರದ ನಿರ್ಮಾಣಕ್ಕಾಗಿ ಐವತ್ತು ಸಾವಿರ ರೂಗಳ ಅನುದಾನವನ್ನು ನೀಡಿದ್ದು, ಬಯಲು ರಂಗಮಂದಿರವು ಈಗಾಗಲೇ ಪೂರ್ಣಗೊಂಡಿದೆ.

ಆ) ಬಯಲು ರಂಗಮಂದಿರಗಳಿಗಾಗಿ ಸ್ಥಳಗಳನ್ನು ಇಲಾಖೆಯು ಗುರುತಿಸುವುದಿಲ್ಲ. ಆದರೆ ಬೇಡಿಕೆಗಳಿಗನುಸಾರವಾಗಿ ಪರಿಶೀಲಿಸಲಾಗುವುದು.

ಇ) ಒಟ್ಟು ಈವರೆಗೂ ರಾಜ್ಯದಲ್ಲಿ 253 ಬಯಲು ರಂಗಮಂದಿರಗಳಿಗೆ ಮಂಜೂರಾತಿ ನೀಡಿದ್ದು ಇವುಗಳಲ್ಲಿ 164 ಬಯಲು ರಂಗಮಂದಿರಗಳು ಪೂರ್ಣಗೊಂಡಿವೆ ಉಳಿದ 89 ಬಯಲು ರಂಗಮಂದಿರಗಳು ವಿವಿಧ ಹಂತದಲ್ಲಿವೆ ಇವುಗಳ ನಿರ್ಮಾಣಕ್ಕಾಗಿ ಇದುವರೆಗೆ ನೀಡಿದ ಒಟ್ಟು ಮೊತ್ತ 1,76,17,750–00 ರೂಗಳು.

ಈ) ಈಗಾಗಲೇ ಆರಂಭಗೊಂಡಿದ್ದು ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು.

ಉ) ಈಗಾಗಲೇ ಕ್ರಮ ಸಂಖ್ಯೆ 1 ರಲ್ಲಿ ಹೇಳಿರುವಂತೆ ರಂಗಮಂದಿರವು ನಿರ್ಮಾಣ ಗೊಂಡಿದೆ.

ಊ) ಉದ್ಭವಿಸುವುದಿಲ್ಲ.

222 (625) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಬೇತ್ರಿ ಯೋಜನೆಯ ಪೈಪ್ ಜೋಡಣೆ ಕಾಮಗಾರಿ ಕೆಲಸ ಈಗ ಯಾವ ಹಂತದಲ್ಲಿದೆ;

ಆ) ಇದಕ್ಕಾಗಿ ಜಲಾಗಾರ ಸಂಗ್ರಹದ ನಿರ್ಮಾಣ ಹಾಗೂ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ;

ಇ) ಈ ಸೌಲಭ್ಯಗಳು ಇಲ್ಲದಿರುವುದರಿಂದ ಈಗಲೂ ಸಹ ಸಮರ್ಪಕ ನೀರು ದೊರೆಯದೆ ಕುಡಿಯುವ ನೀರಿನ ತೊಂದರೆಯಾಗಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ;

ಉ) ನಿಗಧಿಪಡಿಸಿರುವ ಹಣದ ವಿವರ ಒದಗಿಸುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಈ ಯೋಜನೆಯಲ್ಲಿ ಮೂಲ ಅಂದಾಜಿನಲ್ಲಿದ್ದಂತೆ ಬೇತ್ರಿ ಮೂಲ ಸ್ಥಾವರದಿಂದ ಜಲಶುದ್ಧೀಕರಣ ಘಟಕದವರೆಗೆ 200 ಮಿ.ಮೀ. ವ್ಯಾಸದ ಡಿ.ಐ. ಏರು ಕೊಳವೆ ಮಾರ್ಗವನ್ನು ಅಳವಡಿಸಿ ಹಾಲಿ ಇರುವ 200 ಮಿ.ಮೀ. ವ್ಯಾಸದ ಸಿ.ಐ. ಕೊಳವೆ ಮಾರ್ಗಕ್ಕೆ ಜೋಡಿಸಿ ಕಾಮಗಾರಿ ಪೂರ್ಣಗೊಳಿಸಲಾಗಿದೆ.

ಜಲಶುದ್ಧೀಕರಣ ಘಟಕದಿಂದ ಜಲಸಂಗ್ರಹಾಗಾರಗಳಿಗೆ 200 ಮಿ.ಮೀ. ವ್ಯಸದ ಡಿ.ಐ. ಕೊಳವೆಗಳನ್ನು ಹಾಗೂ 160 ಮಿ.ಮೀ. ವ್ಯಾಸದ ಪಿ.ವಿ.ಸಿ. ಕೊಳವೆಗಳನ್ನು ಅಳವಡಿಸಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಈ ಯೋಜನೆಯನ್ನು ಮಂಜೂರಾತಿಯಂತೆ ಪೂರ್ಣಗೊಳಿಸಿ ದಿ: 30.3.04 ರಂದು ಚಾಲನೆಗೊಳಿಸಲಾಗಿದೆ.

ಅ) 2 ಜಲಸಂಗ್ರಹಾಗಾರಗಳಲ್ಲಿ 1 ಜಲಸಂಗ್ರಹಾಗಾರವನ್ನು ನಿರ್ಮಾಣ ಮಾಡಲಾಗಿದ್ದು ನೆಹರು ನಗರದಲ್ಲಿನ ಜಲಸಂಗ್ರಹಾಗಾರವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ವಿದ್ಯುತ್ ಸೌಲಭ್ಯ ಕಲ್ಪಿಸಲಾಗಿದೆ.

ಇ) ನೆಹರು ನಗರ ಬಡಾವಣೆಯನ್ನು ಹೊರತುಪಡಿಸಿ ಉಳಿದ ಯಾವ ಪ್ರದೇಶಕ್ಕೂ ನೀರಿನ ತೊಂದರೆಯಾಗಿರುವುದಿಲ್ಲ.

ಈ) ನೆಹರು ನಗರದಲ್ಲಿ ಜಲಸಂಗ್ರಹಾಗಾರ ನಿರ್ಮಾಣ ಮಾಡಲು ಈಗ ನಿವೇಶನ ಒದಗಿಸಿರುವುದರಿಂದ ಅತೀ ಶೀಘ್ರವಾಗಿ ಜಲಸಂಗ್ರಹಾಗಾರ ನಿರ್ಮಾಣ ಮಾಡಿ ನೀರಿನ ತೊಂದರೆಯನ್ನು ಪರಿಹರಿಸಲಾಗುವುದು.

ಉ) ಈ ಯೋಜನೆಯನ್ನು ಈ ಕೆಳಕಂಡ ಹಣಕಾಸಿನ ವ್ಯವಸ್ಥೆಯಲ್ಲಿ ಕೈಗೊಂಡಿದೆ.

ಕೇಂದ್ರ ಸರ್ಕಾರದ ಪಾಲು	ರೂ. 106.63 ಲಕ್ಷಗಳು
ಕರ್ನಾಟಕ ಸರ್ಕಾರದ ಪಾಲು	ರೂ. 153.37 ಲಕ್ಷಗಳು
ಒಟ್ಟು	ರೂ. 260.00 ಲಕ್ಷಗಳು

ಈ ಯೋಜನೆಗೆ ಡಿಸೆಂಬರ್ 2004ರ ಅಂತ್ಯದವರೆಗೆ ರೂ. 312.37 ಲಕ್ಷಗಳು ವೆಚ್ಚವಾಗಿದೆ.

223 (942) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಮುಖ್ಯಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕು ವ್ಯಾಪ್ತಿಯ ವಿವಿಧ ಇಲಾಖೆಗಳಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಲೋಕಾಯುಕ್ತರಿಂದ ವರದಿಯಾಗಿದೆಯೇ;

ಆ) ಲೋಕಾಯುಕ್ತದವರು ದಾಳಿ ನಡೆಸಿ ತನಿಖೆ ಮಾಡಿ ವರದಿ ಮಾಡಿರುವುದು ನಿಜವೇ;

ಇ) ನಿಜವಿದ್ದಲ್ಲಿ, ಯಾವ ಯಾವ ಇಲಾಖೆಯಲ್ಲಿ ಯಾವ ಯಾವ ಭ್ರಷ್ಟಾಚಾರದ ಅಕ್ರಮಗಳು ಕಂಡು ಬಂದಿರುತ್ತವೆ;

ಈ) ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಮತ್ತು ಆ) ದಿನಾಂಕ 27.10.2004 ರಂದು ಲೋಕಾಯುಕ್ತರು ವಿರಾಜಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ವಿವಿಧ ಕಛೇರಿಗಳಿಗೆ ಭೇಟಿ ನೀಡಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿರುತ್ತಾರೆಂದು ತಿಳಿದುಬಂದಿದೆ. ಈ ಬಗ್ಗೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದನ್ವಯ ಸರ್ಕಾರಕ್ಕೆ ಯಾವುದೇ ವರದಿ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.